


ಇನ್ನು ಎರಡು ವರ್ಷಗಳಲ್ಲಿ ಗೂಗಲ್ ಚಾಲಕರಹಿತ ಟ್ಯಾಕ್ಸಿ ರಸ್ತೆಗಿಳಿಯಲಿದೆ.

**ಲ್ಯಾರಿ ಪೇಜ್ 100 ದಶಲಕ್ಷ ಅಮೆರಿಕನ್ ಡಾಲರ್ ಹಣ ಹೂಡಿದ್ದಾರೆ**



ಕಾರು ತಯಾರಿಸುವ ಕೆಲಸದಲ್ಲಿ ತೊಡಗಿವೆ ಎನ್ನುವ ವರದಿಗಳೂ ಇವೆ. ಜಗತ್ತಿನ ಅಟೊಮೊಬೈಲ್ ಇತಿಹಾಸದಲ್ಲೇ ಇದೊಂದು ಹೊಸ ಕ್ರಾಂತಿ ಎನ್ನುವುದಂತೂ ನಿಶ್ಚಿತ. ಹಾಗೆಯೇ ಮೊದಲು ಮಾರುಕಟ್ಟೆಗೆ ಹಾರುವ ಕಾರನ್ನು ಬಿಡುವ ಕಂಪೆನಿ ಪೇಟೆಂಟ್ ಮೂಲಕ ಬಿಲಿಯಗಟ್ಟಳೆ ಲಾಭ ಗಳಿಸುವುದೂ ನಿಶ್ಚಿತ. ಹಾಗೆಂದೇ ಈ ಉತ್ಪಾದನಾ ತಂತ್ರಜ್ಞಾನವನ್ನು 'ಟಾಪ್‌ಸೀಕ್ರೆಟ್' ಎಂಬಂತೆ ಈ ಕಂಪೆನಿಗಳು ಕಾಪಾಡಿಕೊಂಡು ಬರುತ್ತಿವೆ.

## ಲ್ಯಾರಿ ಪೇಜ್ ಸಾಹಸ

ಲ್ಯಾರಿ ಪೇಜ್‌ನ ಮೊದಲ ಕಂಪೆನಿ ಝೀ ಏರೊ ಸ್ಥಾಪನೆ ಆದದ್ದು 2010ರಲ್ಲಿ. ಗೂಗಲ್ ಕಚೇರಿ ಇರುವ ಪಕ್ಕದ ಮೌಂಟೇನ್ ವ್ಯೂ ನಲ್ಲಿ ಈ ಕಂಪೆನಿಯಿದೆ. ಸುಮಾರು 150 ನೌಕರರು ಮಾತ್ರ ಇಲ್ಲಿದ್ದು ಎರಡು ಹಾರುವ ಕಾರುಗಳನ್ನು ನಿರಂತರ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎನ್ನುವ ವರದಿಗಳಿವೆ. ಲ್ಯಾರಿ ಪೇಜ್ ಈಗಾಗಲೆ ಸುಮಾರು 100 ದಶಲಕ್ಷ ಅಮೆರಿಕನ್ ಡಾಲರ್ ಸ್ವಂತ ಹಣವನ್ನು (ಗೂಗಲ್ ಕಂಪೆನಿಯದ್ದಲ್ಲ) ಈ ಯೋಜನೆಯಲ್ಲಿ ಹೂಡಿದ್ದಾರೆ ಎಂದು ಕಳೆದ ವಾರ ಪ್ರಕಟಿಸಲಾಗಿದೆ. ಈಗಾಗಲೆ ಹಲವು ಪೇಟೆಂಟ್‌ಗಳನ್ನು ಈ ಕಂಪೆನಿಯ ಹೆಸರಲ್ಲಿ ನೋಂದಣಿ ಮಾಡಲಾಗಿದೆ. ಚಾಲಕರಹಿತ ಅಟೊಮೇಟೆಡ್ ಕಾರು ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಉದ್ಯಮಿ ಎಲಾನ್ ಮಸ್ಕ್‌ನ ಕಂಪೆನಿ ಕೂಡಾ ಹಾರುವ ಕಾರು ತಯಾರಿಕೆಯಲ್ಲಿ ಗುಟ್ಟಾಗಿ ತೊಡಗಿದೆ ಎಂಬ ವರದಿಗಳಿರುವ ಹಿನ್ನೆಲೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಈ ಕ್ಷೇತ್ರದಲ್ಲಿ ಯಾರು ಮೊದಲಿಗರಾಗುತ್ತಾರೆ ಎನ್ನುವ ಕುತೂಹಲವೂ ಕೆರಳಿದೆ.

ಈ ಹಿನ್ನೆಲೆಯಲ್ಲೇ ಲ್ಯಾರಿ ಪೇಜ್ ಇನ್ನೊಂದು ಹಾರುವ ಕಾರು ತಯಾರಿಕಾ ಕಂಪೆನಿಯಲ್ಲಿ ಹೂಡಿಕೆ ನಡೆಸಿದ್ದಾರೆ. ಕಿಟ್ಟಿ ಹಾಕ್ ಎನ್ನುವ ಆ ಕಂಪೆನಿಯ ಯಾವ ವಿವರಗಳೂ ಇದುವರೆಗೆ ಬಹಿರಂಗವಾಗಿಲ್ಲ. ಇಲ್ಲಿ ಸುಮಾರು ಒಂದು ಡಜನ್ ಎಂಜಿನಿಯರರು ಕೆಲಸ ಮಾಡುತ್ತಿದ್ದಾರಂತೆ. ಹಲವು ಎಂಜಿನಿಯರರು ಏರೋವೆಲೊ ಕಂಪೆನಿಯಿಂದ ವಲಸೆ ಬಂದವರು ಎನ್ನಲಾಗುತ್ತಿದೆ. ಈ